International Journal of Kannada Research
www.kannadajournal.com

ISSN: 2454–5813
IJSR 2017; 3(1): 134-136
© 2017 IJKS
www.kannadajournal.com
Received: 21-11-2016
Accepted: 22-12-2016

**ಮಧು ಎ.ಪಿ.**
ಸಂಶೋಧನಾ ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ–೫೮೩೨೭೬

**Correspondence**
**ಮಧು ಎ.ಪಿ.**
ಸಂಶೋಧನಾ ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ–೫೮೩೨೭೬

# ಜೇಡರ ದಾಸಿಮಯ್ಯನ ವಚನಗಳಲ್ಲಿ ಲಿಂಗ(ಜೆಂಡರ್)ದ ನೆಲೆಗಳು

**ಮಧು ಎ.ಪಿ.**

ಕನ್ನಡ ವಚನ ಸಾಹಿತ್ಯದ ಸಂದರ್ಭದಲ್ಲಿ ಜೇಡರ ದಾಸಿಮಯ್ಯ ಮತ್ತು ದೇವರ ದಾಸಿಮಯ್ಯ ಇಬ್ಬರು ವಚನಕಾರರು ಇರುವರು ಎಂಬ ವಾದ ಒಂದೆಡೆ ಕಂಡುಬಂದರೆ ಮತ್ತೊಂದು ವಾದದಲ್ಲಿ ಜೇಡರ ದಾಸಿಮಯ್ಯನೆಂಬುವರು ಮಾತ್ರ ಇರುವರು ಮತ್ತು ಅವರ ವಚನಗಳು ಮಾತ್ರ ಇವೆ ಎಂಬ ಸಂಶಯಗಳಿವೆ ಅದೇನೆ ಇರಲಿ, ನಾನು ಪ್ರಸ್ತಾಪಿಸುತ್ತಿರುವದು ಜೇಡರ ದಾಸಿಮಯ್ಯನ ವಚನಗಳನ್ನು ಎಂಬುದು ತಿಳಿಸಬಯಸುತ್ತೇನೆ.

ಜೇಡರ ದಾಸಿಮಯ್ಯನ ವಚನಗಳಲ್ಲಿನ ಪ್ರಭುದ್ದತೆ ನೋಡಿದರೆ ಅವರಿಗಿಂತ ಮುಂಚಿತವಾಗಿಯೇ ಅನೇಕರು ಬೌದ್ಧಿಕ ರಚನೆ ಕಾರ್ಯ ನಡೆಸಿರಬಹುದೆಂಬ ಅನುಮಾನ ಕಾಡದೇ ಇರದು. ಜೇಡರ ದಾಸಿಮಯ್ಯನ ವಚನಗಳು ಅನೇಕ ಮೌಲ್ಯಗಳನ್ನು ಒಳಗೊಂಡ ರಚನೆಗಳಾಗಿವೆ ಹಾಗೂ ಅನೇಕ ಸಂಶೋದನೆಗಳಿಗೆ ಪ್ರಾರಂಭಿಕ ಆಕರಗಳೂ ಆಗಿವೆ. ಅಂತಹ ಮೌಲ್ಯಗಳಲ್ಲಿ 'ಲಿಂಗಾತೀತ'ದ ನೆಲೆಯನ್ನು ವಚನದಲ್ಲಿ ಪ್ರಸ್ತಾಪಿಸಿರುವ ಮೊದಲಿಗರೂ ಇವರೇ ಆಗಿದ್ದಾರೆ.

ಲಿಂಗ ಎಂಬುದು ಕೇವಲ ಸಾಹಿತ್ಯ ಬರಹಕ್ಕೆ ಮಾತ್ರ ಸೀಮಿತವಾಗದೆ ಅದು ಚಿತ್ರ ರಚನೆ, ಮೌಖಿಕ, ಮತ್ತು ಬರಹ ಹೀಗೆ ಮೂರು ರೀತಿಯ ಸಂವಹನ ಮಾಧ್ಯಮಗಳಿಗೆ ಮೂಲವಾಗಿ ಗಮನಿಸಬಹುದು. ಯಾವುದೇ ಒಂದು ಕಲಾಕೃತಿಯ ಹಿಂದೆ ಆ ಕಲಾಕೃತಿಯ ರಚನಾಕಾರನ ಲಿಂಗವು ಪ್ರಮುಖವಾಗಿರುತ್ತದೆ. ಹಾಗೆಯೇ ಮೌಖಿಕ ಕಥೆ ಆಗಲಿ ಅಥವಾ ಗೀತೆಯಾಗಲಿ ಅವುಗಳ ರಚನೆಯ ಹಿಂದೆ ಅವರ ಲಿಂಗವೇ ಕಾರಣವಾಗಿರುತ್ತದೆ. ಈ ಜೆಂಡರ್(ಲಿಂಗ)ನ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಕೃತಿ, ಸಮಾಜ, ಜಾತಿ ಇತರ ಇನ್ನೂ ಅನೇಕವುಗಳು ತಮ್ಮ ಪ್ರಭಾವವನ್ನು ಬೀರುತ್ತಿರುತ್ತವೆ. ಉದಾಹರಣೆಗೆ ಸ್ತ್ರೀ/ಪುರುಷ ಆದರೆ ಆಕೆ ವಾಸಿಸುತ್ತಿರುವ ಪರಿಸರ, ಅವಳ ಜಾತಿ, ವರ್ಗ ಇವೆಲ್ಲವುಗಳ ಪ್ರಭಾವ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಕೆಯ ಅಥವಾ ಆತನ ಸಂವೇದನೆ ಮೇಲೆ ಪರಿಣಾಮವನ್ನು ಉಂಟುಮಾಡುತ್ತಿರುತ್ತವೆ.

ಹೀಗೆ ಲಿಂಗ(ಜೆಂಡರ್)ರಾಜಕಾರಣವು ಕನ್ನಡ ಸಾಹಿತ್ಯದಲ್ಲಿ ಬೆಳವಣಿಗೆ ಹೊಂದಿ ಇಂದು ಅದೂ ಸಹ ಬೃಹತ್ ಸ್ವರೂಪ ಪಡೆದುಕೊಂಡಿದ್ದು ಸ್ತ್ರೀ ಹಾಗೂ ಪುರುಷ ಹಾಗೂ ಈಗ ತೃತೀಯ ಎಂಬ ಲಿಂಗ ಮೂಲವಾಗಿಸಿದ ರೂಪು ಪಡೆದು ಬಳಕೆಗೊಳ್ಳುತ್ತಿರುವುದು ಕಾಣಬಹುದಾಗಿದೆ. ಸ್ತ್ರೀ/ಪುರುಷ/ತೃತೀಯ ಎಂಬಲ್ಲಿಯೇ ಒಂದು ಸಂವೇದನೆ ಎಂಬುದು ಇರುವುದಿಲ್ಲ. ಲಿಂಗವು ತಾನು ಆಧರಿಸಿರುವ ಜಾತಿ, ಪರಿಸರ, ಸಂಸ್ಕೃತಿ ಇವುಗಳ ಸಮರ್ಥನೆಯೊಂದಿಗೆ ರೂಪುಗೊಳ್ಳುತ್ತಿರುತ್ತದೆ. ಹೀಗೆ ರೂಪುಗೊಳ್ಳುವಾಗ ಲಿಂಗವು ಯಾವುದೇ ಒಂದು ಐಡಿಯಾಲಜಿಯಿಂದ ಸಮರ್ಥನೆಗೊಂಡಿರುತ್ತದೆ ಹಾಗೆಯೇ ಅದು ತನ್ನಷ್ಟಕ್ಕೆ ತಾನು ಇನ್ನೊಂದು ಐಡಿಯಾಲಜಿಗಿಂತ ವಿಭಿನ್ನವಾಗಿರುತ್ತದೆ. ಈ ಲಿಂಗದ ಪರಿಕಲ್ಪನೆ ಮತ್ತು ಅವುಗಳು ಹುಟ್ಟುವ ಐಡಿಯಾಲಜಿಗಳ ಬಗೆಗೆ ಜೇಡರ ದಾಸಿಮಯ್ಯನ ವಚನವೇ ಆಧಾರ ಮತ್ತು ವಿಸ್ತರಣೆ ಕೂಡ ಆಗಿದೆ :

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದೀತೆ
ಒಡೆಯನ ಪ್ರಾಣಕ್ಕೆ ಇದ್ದೀತೆ ಯಜ್ಞೋಪವೀತ
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ
ನೀ ತೊಡಕಿಕ್ಕಿದ ತೊಡಕನೀ ಲೋಕದ ಜನರೆತ್ತ ಬಲ್ಲರೈ

**ರಾಮನಾಥ**

ಈ ಮೇಲಿನ ಅರ್ಥವನ್ನು ಹೋಲುವ ಇಂದಿನ ಸ್ತ್ರೀವಾದಿ ಚಿಂತಕೆಯ ಹೇಳಿಕೆ ಹೀಗಿದೆ "ಸ್ತ್ರೀ ವಿಶಿಷ್ಟ

ಅನುಭವವನ್ನು ಅಲ್ಲಗಳೆದು ಲಿಂಗತಟಸ್ಥ ನೀತಿಯನ್ನು ಸ್ಥಾಪಿಸುವ ನಿಲುವಲ್ಲ, ಸ್ತ್ರೀ–ಪುರುಷ ಸಂವೇದನೆಯ ಭಿನ್ನತೆ ಜೈವಿಕ ಮೂಲದ್ದಲ್ಲ, ಅದು ಸಾಂಸ್ಕೃತಿಕ ಜಗತ್ತಿನ ರಚನೆ" ಎಂಬ ಬಿ ಎನ್ ಸುಮಿತ್ರಾಬಾಯಿಯವರ ವ್ಯಾಖ್ಯಾನವು ಸಂವೇದನೆಯ ಭಿನ್ನತೆಗೆ ಜೈವಿಕತೆ ಕಾರಣವಾಗಿರದೆ ಅದಕ್ಕೆ ಅವರು ವಾಸಿಸುವ ಪರಿಸರ ಮತ್ತು ಸಾಂಸ್ಕೃತಿಕ ಜಗತ್ತು ಪ್ರಮುಖ ಕಾರಣವಾಗಿರುತ್ತದೆ ಅವುಗಳೇ ಸಂವೇದನೆಯನ್ನು ನಿಯಂತ್ರಿಸುತ್ತಿರುತ್ತವೆ. ಇಲ್ಲಿ ವಚನ ಹಾಗೂ ಸುಮಿತ್ರಾಬಾಯಿಯವರ ಮಾತುಗಳಲ್ಲಿ 'ಲಿಂಗ(ಜೆಂಡರ್)' ಎಂಬುದು ಜೈವಿಕತೆಯನ್ನು ಮೀರಿದ ಲಿಂಗದ ಬಗೆಗೆ ಮಾತನಾಡಿದ್ದಾರೆ. ಜೇಡರ ದಾಸಿಮಯ್ಯ ಹನ್ನೆರಡನೆಯ ಶತಮಾನದಲ್ಲೇ ಲಿಂಗವನ್ನು ಜೈವಿಕತೆಯಿಂದ ಹೊರತಾಗಿ ನೋಡಿದವರಲ್ಲೊಬ್ಬರಾಗಿದ್ದಾರೆ ಎನ್ನುವುದರ ಮೂಲಕ ಜೇಡರ ದಾಸಿಮಯ್ಯನ ಪ್ರಮುಖರೆನಿಸುವರು.

ಲಿಂಗ ಎಂದ ತಕ್ಷಣ ಗಂಡು/ಹೆಣ್ಣು/ತೃತೀಯ ಲಿಂಗ ಎಂಬುವುಗಳು ಒಂದೇ ತರನಾಗಿರುವುದಿಲ್ಲ. ಅವುಗಳೂ ಸಹ ಸಮಾಜೀಕರಣಗೊಂಡವುಗಳೇ ಆಗಿವೆ. ಜನಿಸಿದಂದಿನಿಂದ ಲಿಂಗದ ಜಾತಿ, ವರ್ಗ ಇವೆಲ್ಲವುಗಳು ಕಾರಣವಾಗಿರುತ್ತವೆ. ಉದಾಹರಣೆಗೆ ಸಮಾಜ ಗುರುತಿಸಿರುವ ದಲಿತ ಸಮುದಾಯದಲ್ಲಿ ಜನಿಸಿದ ಸ್ತ್ರೀ/ಪುರುಷ/ತೃತೀಯ ಲಿಂಗ ಎಂಬುದು ಆಲ್ಲಿನ ಸಂಸ್ಕೃತಿ, ಪರಿಸರದಿಂದ ಪ್ರಭಾವಿತವಾಗಿರುತ್ತದೆ, ಅಲ್ಲದೆ ಅವರ ಲಿಂಗ ಸ್ತ್ರೀ\ಪುರುಷ/ತೃತೀಯ ಲಿಂಗವೇ ಎನ್ನುವುದರ ಮೇಲೆಯೂ ಅವರ ಸಂವೇದನೆಯು ರೂಪಿತಗೊಳ್ಳುತ್ತದೆ. ಹಾಗೆಯೇ ದಲಿತನಲ್ಲದವನು ದಲಿತ ಪರಿಸರದಲ್ಲಿ ಬೆಳೆದರೆ ಅವರಲ್ಲಿಯೂ ದಲಿತ ಸಂವೇದನೆ ರೂಪಿತವಾಗಿರುತ್ತದೆಯೇ ಎಂಬುದು ಗಮನಿಸಬೇಕಾದ ವಿಷಯ. ಹುಟ್ಟಿನ ಜಾತಿಯ ಅಧಿಕೃತತೆಯೇ ಸೃಜನಶೀಲತೆಯ ಅಥವಾ ಕಲಾಕೃತಿಯ ಮೌಲ್ಯಮಾಪನದ ಮಾನದಂಡವಾಗುವುದು ಮತ್ತು ಇನ್ನೊಂದು ಜಾತಿ, ಲಿಂಗದವರು ಬರೆದಾಗ ಅದನ್ನು ವಿರೋಧಿಸುವ ಅಥವಾ ದ್ವೇಷಿಸುವ ಮಟ್ಟಕ್ಕೆ ತಲುಪುವ ಮೂಲಭೂತವಾದಿತನಕ್ಕೆ ಎದುರಾದ ಬಹುದೊಡ್ಡ ಆತಂಕ – ಇದು ಸಹಜ ಅನುಭವಗಳನ್ನು ಒತ್ತಿಟ್ಟು ಈಗಿರುವ ಗೋಡೆಗಳಿಗೆ ಮತ್ತಷ್ಟು ಒಳಗೋಡೆಗಳನ್ನು ಕಟ್ಟುವ ಪ್ರವೃತ್ತಿಯದೇ ಆಗಿದೆ. ದಲಿತರ ಕುರಿತು ದಲಿತರು, ಮುಸ್ಲಿಂರನ್ನು ಕುರಿತು ಮುಸ್ಲಿಮರು, ಸ್ತ್ರೀಯರನ್ನು ಕುರಿತು ಸ್ತ್ರೀಯರು ಮಾತ್ರ ಬರವಣಿಗೆ ಮಾಡಬಲ್ಲರು ಹಾಗೆ ಬರೆದಲ್ಲಿ ಮಾತ್ರವೇ ಅಲ್ಲಿ ನಿಜವಾದ ಸಂವೇದನೆ ಇರುತ್ತದೆ ಎಂಬಲ್ಲಿಗೆ ತಲುಪುತ್ತದೆ.

ಸಮಕಾಲೀನ ಸಂದರ್ಭದೊಳಗೆ ಸ್ತ್ರೀ ಮತ್ತು ಪುರುಷ ಎಂಬ ಪ್ರಯೋಗಗಳು ಸಂಪೂರ್ಣವಾಗಿ ಜೈವಿಕ ಲಿಂಗವನ್ನು ಆರೋಪಿಸಿಯೇ ನೋಡುವುದಿದೆ ಮಹಿಳೆಯಾದ ಕಾರಣದಿಂದ ತಾಯ್ತನ, ಸಂತಾನೋತ್ಪತ್ತಿ, ಲೈಂಗಿಕತೆ ಇವುಗಳಿಂದ ರೂಪಿತವಾಗಿರುವ ಸಂವೇದನೆ ಸ್ತ್ರೀ ಸಂವೇದನೆ ಎಂದೂ, ಹುಟ್ಟಿನಿಂದ ಗಂಡು ಎಂಬ ಕಾರಣದಿಂದ ಶಕ್ತಿ, ಪೌರುಷ, ದುಡಿಮೆ ಈ ಕಾರಣಗಳಿಂದ ಅವನಲ್ಲಿ ಪುರುಷ ಸಂವೇದನೆ ಎಂದೂ ಎರಡೂ ಅಲ್ಲದ ಸ್ಥಿತಿಯೆ ತೃತೀಯ ಲಿಂಗ ಎಂದು ಗ್ರಹಿಸುವುದು ಇದೆ (ತೃತೀಯ ಲಿಂಗ ಎಂದರೆ ಇಲ್ಲಿ ಪುರುಷನಾಗಿ ಹುಟ್ಟಿ ಸ್ತ್ರೀ ಆಗಿರುವ ಅಥವಾ ಸ್ತ್ರೀಯಾಗಿ ಹುಟ್ಟಿ ಪುರುಷನಾಗಿ ಸಮಾಜದಲ್ಲಿ ಜೀವಿಸುತ್ತಿರುವ). ಇದಕ್ಕೆ ಪೂರಕವಾಗಿ ಸಿ ಎನ್ ಆರ್ ರವರ ಈ ಹೇಳಿಕೆಯನ್ನ ನೋಡಬಹುದು "ಸ್ತ್ರೀ ತನ್ನ ಸುತ್ತಲಿನ ಜನರೊಡನೆ, ಪ್ರಕೃತಿಯೊಡನೆ ಕಟ್ಟಿಕೊಂಡಿರುವ ಭಾವನಾತ್ಮಕ ಸಂಬಂಧಗಳನ್ನು ದಾಖಲಿಸುತ್ತವೆ. ಪುರುಷ ಬಹುತೇಕ ಸ್ವಕೇಂದ್ರಿತವಾಗಿದ್ದರೆ ಸ್ತ್ರೀಹೆಚ್ಚಾಗಿ ಸಂಬಂಧ ಕೇಂದ್ರಿತವಾಗಿ, ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ ಸ್ವರೂಪದ್ದಾಗಿರುತ್ತದೆ" ಇಲ್ಲಿ ಅವರ ಹುಟ್ಟಿನ ಕಾರಣದಿಂದ ಅವರಲ್ಲಿ ಆ ಲಿಂಗ ಯಾವ ರೀತಿ ರೂಪ ಪಡೆದಿದೆ ಎಂಬುದು. ಸ್ತ್ರೀಯರಿಂದ\ಪುರುಷರಿಂದ ರಚಿಸಲ್ಪಟ್ಟ ವಾಙ್ಮಯವೆಲ್ಲವೂ ಸ್ತ್ರೀ\ಪುರುಷ ಸಂವೇದನೆಯಿಂದ ಕೂಡಿರುತ್ತದೆ ಎಂಬುದು ಮಾತ್ರ ಸತ್ಯದೂರ. ಈ ಪದ ಪ್ರಯೋಗಗಳು ಗ್ರಹಿಕೆಯ ಸ್ವರೂಪವನ್ನು ಮಾತ್ರ ವಿವರಿಸುತ್ತವೆ. ಮನೋವಿಜ್ಞಾನಿಗಳು ದರ್ಶಿಸಿರುವಂತೆ ಸ್ತ್ರೀತ್ವ ಮತ್ತು ಪುರುಷತ್ವ ಭಿನ್ನ ಪ್ರಮಾಣಗಳಲ್ಲಿ ಸ್ತ್ರೀ– ಪುರುಷರಿಬ್ಬರಲ್ಲೂ ಜೈವಿಕನೆಲೆಯಲ್ಲಿ ಮತ್ತು ಪ್ರಜ್ಞೆಯ ನೆಲೆಯಲ್ಲಿ ಇರುತ್ತವೆ.

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ
ರಾಮನಾಥ ( ಜೇಡರ ದಾಸಿಮಯ್ಯ)

ಜೇಡರ ದಾಸಿಮಯ್ಯನವರ ವಚನದಲ್ಲಿ ಲಿಂಗತ್ವವನ್ನು ಮೀರಿ ಆಧ್ಯಾತ್ಮಿಕವಾದ ಬೇರೊಂದು ಲಿಂಗಾತೀತವಾದ ಸ್ಥಾನದ ಗುರುತಿಸುವಿಕೆ ಇದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಹನ್ನೆರಡನೆ ಶತಮಾನದ ವಚನಸಾಹಿತ್ಯದಲ್ಲಿ ದೇಹ ಲಿಂಗತ್ವದ ಎಲ್ಲಾ ಭಿನ್ನತೆಗಳಿಗೂ ಅತೀತವಾದ ದ್ವಿಲಿಂಗತ್ವದ್ದು ಅಲ್ಲದ, ಲಿಂಗಾತೀತವೆನ್ನಬಹುದಾದ ಸ್ಥಿತಿಯೊಂದಕ್ಕಾಗಿ ತಮ್ಮೆಲ್ಲ ಆಧ್ಯಾತ್ಮಿಕ ಸಾಧನೆಯನ್ನು ಮಾಡಿರುವುದು ಮತ್ತು ವಚನಗಳಲ್ಲಿ ಅಂಥ ಅನುಭವಕ್ಕೆ ಅಭಿವ್ಯಕ್ತಿ ನೀಡಲು ಪ್ರಯತ್ನಿಸಿರುವದು ಜೇಡರ ದಾಸಿಮಯ್ಯನ ವಚನಗಳಲ್ಲಿ ಹಾಗೂ ಇತರ ವಚನಕಾರರಾದ ಬಸವಣ್ಣ, ಅಲ್ಲಮಪ್ರಭು, ಅಕ್ಕ, ಮುಕ್ತಾಯಕ್ಕ ಇತರರವಚನಗಳಲ್ಲೂ ವ್ಯಕ್ತವಾಗಿದೆ.

ಎಪ್ಪತ್ತರ ದಶಕದಲ್ಲೂ ಪಾಶ್ಚಾತ್ಯ ಚಿಂತನಾವಲಯದಲ್ಲಿ ಲಿಂಗಭಿನ್ನತೆಯನ್ನು ಮೀರುವ ಅತೀತತೆಯವಾದ (Transendentalism) ತುಂಬ ಪ್ರಭಾವಶಾಲಿಯಾಗಿತ್ತು. ಅಂತಹ ಪರಿಸರದಲ್ಲಿ ಮೇರಿಡಾಲಿ ಮತ್ತು ಆಡ್ರಿಯನ್ ರಿಚ್‌ರು ಸ್ತ್ರೀಯ ಅಂತಃಸತ್ವವೊಂದರ ಪ್ರತಿಪಾದನೆಗೆ ಯತ್ನಿಸಿದ್ದು ಸಹಜ ಅಂದರೆ ಕಾಲ, ದೇಶ, ಜನಾಂಗ, ವರ್ಗ, ಸಾಂಸ್ಕೃತಿಕ ವ್ಯತ್ಯಾಸಗಳೆಲ್ಲದರಿಂದಲೂ ಅತೀತವಾಗಿರುವ ಸ್ತ್ರೀ ಸತ್ವವೊಂದಿದೆ, ಸ್ತ್ರೀಯರ ಜೀವ ಸೃಷ್ಟಿಯ ಶಕ್ತಿ, ಅವರ ಜೀವಪರತೆ, ಸಂರಕ್ಷಕ ಗುಣಗಳೇ ಈ ಸತ್ವದ ಲಕ್ಷಣಗಳೆಂದು ಸಾರಿ ಒಂದು ರೀತಿಯ ಅಮೂರ್ತ ಆಧ್ಯಾತ್ಮಕ ಸ್ತ್ರೀಶಕ್ತಿಯನ್ನು ಅವರು ಪ್ರತಿಪಾದಿಸುತ್ತಾರೆ. ಇಂಥ ಸ್ತ್ರೀ ಶಕ್ತಿಯನ್ನು ಮತ್ತೆ ಗಳಿಸಿಕೊಳ್ಳುವುದೇ ಸ್ತ್ರೀ ಪರಿಸರವಾದಿ ಹೋರಾಟವೆಂದು 'ಮೇರಿಡಾಲಿ' ಕರೆದಿದ್ದಾಳೆ. ಅದೇನೆ ಇರಲಿ ಕನ್ನಡದ ವಚನಸಾಹಿತ್ಯ ಸಂದರ್ಭದಲ್ಲಿಯೇ ಜೈವಿಕ ಲಿಂಗವನ್ನು ಮೀರಿರುವ ಸ್ಥಿತಿ ಇಂದಿನ ಸೃಜನಶೀಲ ಸಂದರ್ಭದೊಳಗೆ ಬಹಳ ಮುಖ್ಯವೆನಿಸುತ್ತವೆ ಮತ್ತು ಇಂದಿನ ಅಧ್ಯಯನಗಳಿಗೆ ಮೂಲ ಆಕರಗಳೂ ಆಗಿವೆ.

ಮೈಗೆ ಕಾಹ ಹೇಳುವರಲ್ಲದೆ
ಮನಕ್ಕೆ ಕಾಹ ಹೇಳುವರೆ
(ಬಸವಣ್ಣ)

**ಆಕರಗಳು**


- ಕೇಶವಶರ್ಮ ಎ. ೨೦೧೩, *ಸ್ತ್ರೀವಾದಿ ಪರಿಕಲ್ಪನೆಗಳು*, ದೇಸಿ ಪ್ರಕಾಶನ, ಬೆಂಗಳೂರು.
- ನಾಗಭೂಷಣಸ್ವಾಮಿ ಓ ಎಲ್. ೨೦೦೪, *ವಚನಸಾವಿರ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಾಮಚಂದ್ರನ್ ಸಿ. ಎನ್. ೨೦೧೧, *ಆಖ್ಯಾನ–ವ್ಯಾಖ್ಯಾನ*,

ಸಪ್ನ ಬುಕ್ ಹೌಸ್, ಬೆಂಗಳೂರು.

- ಸುಮಿತ್ರಾ ಬಾಯಿ ಬಿ.ಎನ್. ೨೦೧೪, *ಬೊಗಸೆಯಲ್ಲಿ ಹೊಳೆನೀರು*, ವಿಕಾಸ ಪ್ರಕಾಶನ, ಬೆಂಗಳೂರು.
- ಶ್ರೀಮತಿ ಎಚ್. ಎಸ್. ೨೦೦೬, *ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ*, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.